# IN THE COURT OF THE ADDL. SENIOR CIVIL JUDGE & JMFC., GUBBI

# **OS – 65/2016**

Witness present and duly sworn on : 02.07.2025.

Further cross Examination: by Counsel for defendant No.42 :

ನನ್ನ ಪ್ರತಿವಾದ ಪತ್ರದಲ್ಲಿ ತೋರಿಸಿರುವ ನಿವೇಶನಗಳು ಅಂದರೆ ಐಟಂ ನಂ.14 ರಿಂದ 17 ಆಸ್ತಿಗಳ ಬಗ್ಗೆ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ಸದರಿ ಆಸ್ತಿಗಳು ಇರುವುದಿಲ್ಲ ಮತ್ತು ಅವುಗಳಿಗೆ ಸಂಭಂದಿಸಿರುವ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದ ಐಟಂ ನಂ.1 ರಿಂದ 4 ಆಸ್ತಿಗಳಿಗೆ ಸಂಭಂದಿಸಿದಂತೆ ನಾನು ನನ್ನ ಅತ್ತೆ , ಮೈದುನರ ಮೇಲೆ OS No.242/2013 ಗುಬ್ಬಿಯ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆಂದರೆ ಸರಿ. ಸದರಿ ದಾವೆಯನ್ನು ಮೊದಲು ಕೇವಲ ಆರು ಆಸ್ತಿಗಳಿಗೆ ಸಲ್ಲಿಸಿದ್ದೇನು ಎಂದರೆ 25 ಆಸ್ತಿಗಳಿಗೆ ಸಲ್ಲಿಸಿರುತ್ತೇನೆ. ಸದರಿ ದಾವೆಯಲ್ಲಿ ನನ್ನ ವಿಚಾರಣೆ ಮುಗಿದ ನಂತರ ಪ್ರತಿವಾದಿಗಳ ವಿಚಾರಣೆ ನಡೆಯುತ್ತಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಮೊದಲಿಗೆ ನನ್ನ ಅತ್ತೆ ಹಾಗೂ ಮೈದುನರ ಮೇಲೆ ಸಲ್ಲಿಸಿದ್ದೇನು ಎಂದರೆ ಸರಿ. ಸದರಿ ದಾವೆಯಲ್ಲಿ ನಂತರದಲ್ಲಿ ನಾನು ಈದಾವೆಯ ಆಸ್ತಿಗಳು ಹಾಗೂ ಪಕ್ಷಗಾರರನ್ನು ನಾನು ಸಲ್ಲಿಸಿದ್ದ ದಾವೆಯಲ್ಲಿ ಸೇರಿಸಿದೆನು ಎಂದರೆ ಸರಿ. ಸದರಿ ದಾವೆಯನ್ನು ನ್ಯಾಯಾಲಯದ ವ್ಯಾಪ್ತಿಯಿಂದ ಹೊರಬರುತ್ತದೆಂದು ವರ್ಗಾವಣೆ ಆಗಿದೆ ಎಂದರೆ ಸರಿ. ಸದರಿ ದಾವೆ ಈ ನ್ಯಾಯಾಲಯದಲ್ಲಿ OS No.130/2025 ನಡೆಯುತ್ತಿದೆ ಎಂದರೆ ಸರಿ. ಸದರಿ ದಾವೆಯನ್ನು ನಡೆಸದೆ ನಾನು ಈ ದಾವೆಯಲ್ಲಿ ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದ ಪತ್ರದಲ್ಲಿ ತೋರಿಸಿರುವ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಜೀವಿತ ಕಾಲದಲ್ಲಿ ಆತನಿಗೆ ಪಾಲು ಕೊಟ್ಟು ಬೇರೆ ಬೇರೆ ಆಗಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನ ಜೀವಿತ ಕಾಲದಲ್ಲಿ ನನ್ನ ಗಂಡ ಹಾಗೂ ಮೈದುನರು ಬೇರೆ ಬೇರೆ ವಾಸ ಇದ್ದೇವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲರೂ ಜೊತೆಯಲ್ಲಿ ಇದ್ದೇವೆ ಮತ್ತು ಜೊತೆಯಲ್ಲಿ ವ್ಯವಸಾಯ

ಮಾಡುತ್ತಿದ್ದೇವೆ. ಈ ದಾವೆಯ ಸಲುವಾಗಿ ಸೃಷ್ಟಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ.

Further cross Examination: by Counsel for plaintiff:

Submits no cross-examination.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi